**01-K**

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003**

# KARNATAKA SCHOOL EXAMINATION AND ASSESSMENT BOARD

**6th Cross, Malleshwaram, Bengaluru – 560 003**

## 2025–26 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 3

## S.S.L.C. MODEL QUESTION PAPER - 3 : 2025 - 26

## ವಿಷಯ : ಪ್ರಥಮ ಭಾಷೆ – ಕನ್ನಡ

## Subject : First Language — KANNADA

**ವಿಷಯ ಸಂಕೇತ : 01-K** — **Subject Code : 01-K**

ಸಮಯ : 3 ಗಂಟೆ 15 ನಿಮಿಷಗಳು ] — [ Time : 3 Hours 15 Minutes

ಗರಿಷ್ಠ ಅಂಕಗಳು : 100 ] — [ Max. Marks : 100

---

**ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :**

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 6 X 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ದೀರ್ಘಸ್ವರಗಳ ಸಂಖ್ಯೆ
   (ಎ) ೨
   (ಬಿ) ೬
   (ಸಿ) ೭
   (ಡಿ) ೯
2. 'ಅತ್ಯವಸರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ
   (ಎ) ವೃದ್ಧಿ
   (ಬಿ) ಯಣ್
   (ಸಿ) ಜಶ್ತ್ವ
   (ಡಿ) ಶ್ಚುತ್ವ
3. ಸಂಬೋಧನೆ, ಹರ್ಷ, ಆಶ್ಚರ್ಯ, ದುಃಖ ಮುಂತಾದ ಭಾವನೆಗಳು ಉಂಟಾದಾಗ ಬಳಸುವ ಲೇಖನ ಚಿಹ್ನೆ
   (ಎ) ಪೂರ್ಣವಿರಾಮ
   (ಬಿ) ಅಲ್ಪವಿರಾಮ
   (ಸಿ) ಪ್ರಶ್ನಾರ್ಥಕ
   (ಡಿ) ಭಾವಸೂಚಕ
4. 'ನೋಡು' ಧಾತುವಿನ ನಿಷೇಧಾರ್ಥಕ ರೂಪ
   (ಎ) ನೋಡಲಿ
   (ಬಿ) ನೋಡೇವು
   (ಸಿ) ನೋಡದು
   (ಡಿ) ನೋಡಿಯಾನು
5. ಪಂಚಮೀ ವಿಭಕ್ತಿಯ ಕಾರಕಾರ್ಥವಿದು
   (ಎ) ಅಪಾದಾನ
   (ಬಿ) ಸಂಪ್ರದಾನ
   (ಸಿ) ಕರಣಾರ್ಥ
   (ಡಿ) ಅಧಿಕರಣ
6. 'ಮುಕ್ಕಣ್ಣು' ಪದವು ಈ ಸಮಾಸಕ್ಕೆ ಸೇರಿದೆ
   (ಎ) ದ್ವಿಗು
   (ಬಿ) ಬಹುವ್ರೀಹಿ
   (ಸಿ) ದ್ವಂದ್ವ
   (ಡಿ) ತತ್ಪುರುಷ

**II.** **ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 X 1 = 4**

7. ಕಲಶ : ಕಳಸ : : ವಂಶ : .................... .
8. ಯಾರು : ಪ್ರಶ್ನಾರ್ಥಕ ಸರ್ವನಾಮ : : ತಾನು : .................... .
9. ಸತಿಪತಿ : ಜೋಡುನುಡಿ : : ತುತ್ತತುದಿ : .................... .
10. ಬರೆದ : ಕೃದಂತ ನಾಮ : : ಬರೆದು : .................... .

**III.** **ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7 X 1 = 7**

11. ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು?
12. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?
13. ನೆಲ್ಸನ್‌ರವರ ಮೂರ್ತಿ ಇರುವ ಸ್ಥಳದ ಹೆಸರೇನು?
14. ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಲು ಕಾರಣವೇನು?
15. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಯಾವುದು?
16. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು?
17. ಪುಟ್ಟ ಪೋರಿಯ ಅಮ್ಮ ಗುಡಿಸಿಲಿನಲ್ಲಿ ಹೇಗೆ ಮಲಗಿದ್ದಾಳೆ?

**IV.** **ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10 X 2 = 20**

18. ಕನ್ನಡ ಭಾಷೆ ಹದಗೊಂಡದ್ದು ಹೇಗೆ?
19. ಕೈಕಾರಿಕೀಕರಣಕ್ಕೆ ವಿಶ್ವೇಶ್ವರಯ್ಯ ಅವರು ನೀಡಿದ ಕೊಡುಗೆಯನ್ನು ತಿಳಿಸಿ.
20. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯನ್ನು ತಿಳಿಸಿ.
21. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ವಿದ್ಯಾಭ್ಯಾಸದ ನಂತರ ಮಾವನೆಂದು ಹೇಳಲು ಕಾರಣವೇನು?
22. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?
23. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?
24. ಜಲಿಯನ್ ವಾಲಾಬಾಗ್ ಮಣ್ಣಿನ ಕುರಿತು ಭಗತ್‌ಸಿಂಗ್ ತನ್ನ ತಂಗಿಗೆ ಹೇಳಿದ ಮಾತುಗಳಾವುವು?
25. ಬಾಳಿನಲ್ಲಿ ತೃಪ್ತಿ ದೊರೆಯಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ?
26. ಜ್ಞಾನಿ ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವನ್ನು ಬರೆಯಿರಿ.
27. ಪ್ರಾಸವನ್ನು ಬಿಟ್ಟು ಬರೆಯಬೇಕೆಂದು ನಿರ್ಧರಿಸಿದ ಪೈಗಳು ಪ್ರಾಸವನ್ನು ಇಟ್ಟೇ ಬರೆಯಲು ಕಾರಣವೇನು?

**V.** **ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** **2 X 3 = 6**

28. ಎ. ಎನ್. ಮೂರ್ತಿರಾವ್
29. ಕುವೆಂಪು

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 X 3 = 3**

30. ಮಸೆವ ದಾಡಿಯ ಕುಡಿಗಳಿಂದ ಕಿಡಿಸುರಿಯೆ ಘೂ
ರ್ಮಿಸುವ ಮೂಗಿಂದ ಕರ್ಬೊಗೆ ನೆಗೆಯೆ ಮುನಿದು ನಿ
ಟ್ಟಿಸುವ ಕೆಂಗಣ್ಣ ಕಡೆಯಿಂದ ದಳ್ಳುರಿ ಸೂಸೆ ಬಲಿದ ಕೊರಳೊಲೆದ ಮುಸುಡು

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 X 3 = 3**

31. "ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : 1 X 3 = 3**

32. ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ.

**ಅಥವಾ**

ತುಂಬಿದ ಕೊಡ ತುಳುಕುವುದಿಲ್ಲ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 X 3 = 18**

33. "ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು."
34. "ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು"
35. "ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ?"
36. "ಸಾರ್ವಭೌಮರಾ ನೆತ್ತಿಯ ಕುಕ್ಕಿ"
37. "ನೆಲಕಿಚಿವೆನೆಂದು ಬಗೆದಿರೆ ಚಲಕಿಚಿವೆಂ"
38. "ವಿದ್ಯಾಧನಮೆ ಧನಮಪ್ಪುದು"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 X 4 = 4**

39. ಕಲುಷಿತವಾದೀ ..............................................................
..............................................................................
..............................................................................
.............................................................. ಮುಟ್ಟೋಣ

**ಅಥವಾ**

ಮತಗಳೆಲ್ಲವೂ ..................................................
..............................................................................
..............................................................................
.......................................................... ಬಿತ್ತೋಣ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 X 4 = 4**

40. ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

41. ಮತಂಗಾಶ್ರಮಕ್ಕೆ ಬಂದ ಶ್ರೀರಾಮಲಕ್ಷ್ಮಣರನ್ನುಶಬರಿ ಉಪಚರಿಸಿ ಮುಕ್ತಿಯನ್ನು ಪಡೆದ ಬಗೆಯನ್ನು ವಿವರಿಸಿ.

**ಅಥವಾ**

ಶ್ರೀರಾಮನ ದರ್ಶನದಿಂದ ತನ್ನ ಬಹುಕಾಲದ ಆಸೆಯನ್ನು ಶಬರಿ ಈಡೇರಿಸಿಕೊಂಡ ಬಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

42. ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

ಪಾಂಡವರ ರಕ್ಷಣೆಗೆ ನಿಂತ ಶ್ರೀಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳನ್ನು ಸಂಗ್ರಹಿಸಿ ಬರೆಯಿರಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 X 4 = 4 (2+2)**

43. ಯಾವ ಭೇದಭಾವವು ಇಲ್ಲದೆ ವಿದ್ಯೆ ಎಂಬುದು ಓದುಗನ ಸ್ವತ್ತಾಗುತ್ತದೆ. ಆದರೆ ವಿದ್ಯೆ ಓದುವವರಲ್ಲಿಯ ಶಿಸ್ತು, ಶ್ರದ್ಧೆ, ಏಕಾಗ್ರತೆ, ಸಮಯಪಾಲನೆ, ಜ್ಞಾಪಕಶಕ್ತಿ ಮತ್ತು ನಿರಂತರ ಅಧ್ಯಯನವನ್ನು ಬಯಸುತ್ತದೆ. ಹಾಗೆಯೇ ಓದು ಕೂಡ ಕೆಲವರ ಸ್ವತ್ತಲ್ಲ. ಓದು ಕೆಲವರಿಗೆ ಮಾತ್ರ ಹತ್ತುತ್ತದೆ. ಮತ್ತೆ ಕೆಲವರಿಗೆ ಅಸಾಧ್ಯ ಎಂಬ ಮಾತಿನಲ್ಲಿ ಹುರುಳಿಲ್ಲ. ಚೆನ್ನಾಗಿ ಓದಿಕೊಂಡಿರುವವರ ಮಕ್ಕಳಿಗೆ ಓದು ಬರುವುದೆಂದು, ಅಕ್ಷರ ಜ್ಞಾನವಿಲ್ಲದವರ ಮಕ್ಕಳಿಗೆ ಬರುವುದಿಲ್ಲವೆಂದುಕೊಳ್ಳುವುದು ತಪ್ಪಾಗುತ್ತದೆ. ಸಾಮಾನ್ಯವಾಗಿ ಹೇಳಬೇಕೆಂದರೆ ಓದಿದವರ ಮಕ್ಕಳಿಗಿಂತ ಓದದವರ ಮಕ್ಕಳೇ ಹೆಚ್ಚಿನ ಜಯ ಸಾಧಿಸಿದ್ದಾರೆ. ನಮ್ಮ ದೇಶದಲ್ಲಿ ಅಂಬೇಡ್ಕರವರಿಂದ ಹಿಡಿದು ಇತ್ತೀಚಿನ ಮೆಡಿಕಲ್, ಕೆ. ಎ. ಎಸ್, ಐ. ಎ. ಎಸ್, ಐ. ಪಿ. ಎಸ್ ಮುಂತಾದ ಪರೀಕ್ಷೆಗಳನ್ನು ಪಾಸುಮಾಡಿ ಉನ್ನತ ಹುದ್ದೆಗಳನ್ನು ಅಲಂಕರಿಸಿದವರಲ್ಲಿ ಬಡವರ ಮಕ್ಕಳು, ರೈತರ ಮಕ್ಕಳು ಹೆಚ್ಚಿದ್ದಾರೆ. ಇದರಿಂದ ತಿಳಿಯುವುದೇನೆಂದರೆ ಓದುವುದು ಒಂದು ಕಲೆ. ಆದ್ದರಿಂದ ಓದಲು ತೊಡಗುವ ವಿದ್ಯಾರ್ಥಿಗಳು ಒಂದು ದೃಢಸಂಕಲ್ಪವನ್ನು ಮಾಡಿ ಓದಲು ಪ್ರಾರಂಭಿಸುವುದು ಉತ್ತಮ. ಅದೇನೆಂದರೆ ಈಗ ನಾನು ಒಂದು ಗಂಟೆ ಸಮಯ ಓದಲಿದ್ದೇನೆ. ಈ ಸಮಯದಲ್ಲಿ ವಾಟರ್‌ಪ್ರೂಫ್ ವಾಚಿನ ಹಾಗೆ ನನ್ನ ಮನಸ್ಸಿನೊಳಗೆ ಓದನ್ನು ಬಿಟ್ಟು ಬೇರೆ ಯಾವ ಆಲೋಚನೆಗಳು ಹೋಗುವುದಿಲ್ಲ. ವಿಷಯವನ್ನೆಲ್ಲ ಅರಿತುಕೊಳ್ಳುತ್ತೇನೆ. ಈ ಓದಿನಿಂದ ಹೆಚ್ಚು ಜ್ಞಾನವನ್ನು ನಾನು ಪಡೆದುಕೊಳ್ಳುತ್ತೇನೆ. ನಾಳೆಯೇ ಪರೀಕ್ಷೆ ಎಂದುಕೊಂಡು, ನಾಳೆಯ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸುತ್ತೇನೆ. ಈ ಪರೀಕ್ಷೆಯಲ್ಲಿ ನಾನೇ ಪ್ರಥಮಸ್ಥಾನ ಪಡೆಯುತ್ತೇನೆ. ನಾನು ಅಂದುಕೊಂಡ ಗುರಿಯನ್ನು ಸಾಧಿಸುತ್ತೇನೆ. ಹೀಗೆ ನಮ್ಮ ಮನಸ್ಸನ್ನು ಒಂದು ಹದಕ್ಕೆ ತಂದುಕೊಂಡು ಓದಲು ಪ್ರಾರಂಭಿಸಬೇಕು. ಪ್ರಾರಂಭಿಸಿದ ನಂತರ ನಮ್ಮ ಶ್ರದ್ಧೆ ಮತ್ತು ಏಕಾಗ್ರತೆಯಲ್ಲಿ ಕಿಂಚಿತ್ತು ಬದಲಾವಣೆ ಆಗದಂತೆ ಕನಿಷ್ಠ ಒಂದು ಗಂಟೆ ಕಾಲವಾದರೂ ಒಂದೆಡೆ ಕುಳಿತು ಓದಬೇಕು. ಪಠ್ಯಪುಸ್ತಕವಾಗಲಿ, ವೃತ್ತಪತ್ರಿಕೆಯಾಗಲಿ ಅಥವಾ ಇಷ್ಟವಾದ ಪುಸ್ತಕಗಳೇ ಆಗಿರಲಿ ಹೀಗೆ ಓದಿದ ಕೂಡಲೆ

[ Turn over

ಎಲ್ಲ ವಿಷಯವು ನೆನಪಿನಲ್ಲಿ ಉಳಿಯುತ್ತದೆ ಎಂದುಕೊಳ್ಳಬಾರದು. ಮೊದಲ ಬಾರಿ ಓದಿದಾಗ ಅದರಲ್ಲಿಯ ಮುಖ್ಯಾಂಶಗಳು ನೆನಪಿನಲ್ಲಿ ಉಳಿಯುತ್ತವೆ. ಅಗತ್ಯಬಿದ್ದರೆ ಎರಡು ಮತ್ತು ಮೂರನೆಯ ಬಾರಿಗೆ ಓದಿದಾಗ ಓದಿದ ಎಲ್ಲ ವಿಷಯ ಮನದಟ್ಟಾಗುತ್ತದೆ. ಆದರೆ ಓದುವಾಗ ಯಾರು? ಯಾವಾಗ? ಏನು? ಎಲ್ಲಿ? ಯಾವ ಘಟನೆ? ಪ್ರಯೋಗದಲ್ಲಿ ಬಳಸಿದ ವಸ್ತುಗಳಾವವು? ವಿಧಾನ? ಪ್ರಯೋಜನ? ಹೀಗೆ ಓದಿನ ವಿಷಯದಲ್ಲಿ ಎಷ್ಟೆಷ್ಟು ಪ್ರಶ್ನೆಗಳನ್ನು ಮಾಡಲು ಸಾಧ್ಯವೋ ಅಷ್ಟು ಪ್ರಶ್ನೆಗಳನ್ನು ಮಾಡಿಕೊಳ್ಳುತ್ತ, ಅವುಗಳಿಗೆ ಉತ್ತರಗಳನ್ನು ಅಲ್ಲಿಯೇ ಕಂಡುಕೊಳ್ಳುತ್ತಾ, ಮನದಟ್ಟು ಮಾಡಿಕೊಳ್ಳುತ್ತಾ, ಮುಂದೆ ಸಾಗಬೇಕು. ಇದರಿಂದ ಓದಿನಲ್ಲಿ ಸ್ಪಷ್ಟತೆ ಬರುತ್ತದೆ. ವಿಷಯ ಮನದಟ್ಟಾಗುತ್ತದೆ. ಆಗ ಪರೀಕ್ಷೆಗಳು ಸುಲಭ ಎನಿಸುತ್ತವೆ. ಆಗ ವಿದ್ಯಾರ್ಥಿಗಳಾದ ನಾವು ರ್‍ಯಾಂಕ್ ಪಡೆದು ಅಂದುಕೊಂಡ ಗುರಿ ಸಾಧಿಸುವುದರೊಂದಿಗೆ ಸಮಾಜ ಸೇವೆಯನ್ನು ಮಾಡಲು ಒಂದು ಅವಕಾಶ ದೊರೆಯುತ್ತದೆ. ರಾಕೆಟ್‌ನ್ನು ಉದಾಹರಣೆಯನ್ನಾಗಿ ತೆಗೆದುಕೊಂಡರೆ ಅದರಲ್ಲಿ ಸಾಕಾಗುವಷ್ಟು ಇಂಧನವಿರಬೇಕು. ಸೇರಬೇಕಾದ ಕಕ್ಷೆ ಸೇರಲು ತಕ್ಕ ಯಂತ್ರಗಳಿರಬೇಕು. ಅವು ನಿರಂತರವಾಗಿ ಕೆಲಸ ಮಾಡುತ್ತ ಸಾಗಬೇಕು. ಸ್ವಲ್ಪವು ವ್ಯತ್ಯಾಸವಾಗದಂತೆ ನಿಯಂತ್ರಿಸುವ ವಿಜ್ಞಾನಿಗಳು ಇರಬೇಕು. ಆಗ ರಾಕೆಟ್ ಕಕ್ಷೆಯನ್ನು ಸೇರಿ ಜನರಿಗೆ ಸ್ಯಾಟಲೈಟ್ ಸೌಲಭ್ಯವನ್ನು ಕೊಡಬಲ್ಲದು. ಹಾಗೆಯೆ ವಿದ್ಯಾರ್ಥಿಯ ಓದಿನ ಪ್ರಕ್ರಿಯೆಯನ್ನು ಒಂದು ರಾಕೆಟ್‌ಗೆ ಹೋಲಿಸಬಹುದು ವಿದ್ಯಾರ್ಥಿಯ ಜೀವನದಲ್ಲೂ ಕೂಡ ಇಂಧನವೆಂಬ ಆರೋಗ್ಯ, ಸೇರಬೇಕಾದ ಕಕ್ಷೆ ಸೇರಲು ತಕ್ಕ ಯಂತ್ರಗಳೆಂಬ ಏಕಾಗ್ರತೆ, ಕಕ್ಷೆಯನ್ನು ಸುತ್ತುವ ನಿರಂತರ ಕೆಲಸವೆಂಬ ಸಮಯಪಾಲನೆ, ಉಸ್ತುವಾರಿ ನೋಡುವ ನಿಯಂತ್ರಕರೆಂಬ ಶಿಕ್ಷಕರು ಮತ್ತು ಪಾಲಕರು ಇರುವಾಗ ನೀವು ಸ್ಯಾಟಲೈಟ್‌ನಂತೆ ಸೌಲಭ್ಯಕೊಡುವ ರಾಕೆಟ್‌ನಂತೆ ಪರೀಕ್ಷೆಗಳಲ್ಲಿ ಪಾಸಾಗಿ ಸಮಾಜ ಸೇವೆಯನ್ನು ಮಾಡುವಂತ ಒಬ್ಬ ಸಾಧಕರಾಗವುದು ಬಹಳ ಸರಳ. ಈ ಎಲ್ಲ ಸೌಲಭ್ಯಗಳು ಸಾಮಾನ್ಯವಾಗಿ ದೊರತೇ ದೊರೆಯುತ್ತವೆ. ಆದರೆ ಗುರಿಮುಟ್ಟುವವರೆಗೆ ನಮ್ಮ ಪ್ರಯತ್ನ ಬೇಕೇಬೇಕು.

**ಪ್ರಶ್ನೆಗಳು**

ಅ) ಪರೀಕ್ಷೆಗಳು ಯಾವಾಗ ಸುಲಭ ಎನಿಸುತ್ತವೆ? ತಿಳಿಸಿ.

ಆ) ವಿದ್ಯಾರ್ಥಿಗಳು ತಮ್ಮ ಓದನ್ನು ಹೇಗೆ ಪ್ರಾರಂಭಿಸಬೇಕು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 X 5 = 5**

44. ನಿಮ್ಮನ್ನು ಹಾವೇರಿ ನಗರದ ಬಸವೇಶ್ವರ ಬಡಾವಣೆಯಲ್ಲಿ ವಾಸವಿರುವ 'ರಮೇಶ್' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ ಹೆಚ್ಚಾಗಿರುವ ಬೀದಿ ನಾಯಿಗಳ ಹಾವಳಿಗೆ ಕಡಿವಾಣ ಹಾಕುವಂತೆ ಕೋರಿ, ನಗರ ಪಾಲಿಕೆಯ ಮುಖ್ಯಾಧಿಕಾರಿಗೆ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಉತ್ತರ ಕನ್ನಡ ಜಿಲ್ಲೆಯ ಹುನಗುಂದ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಹರ್ಷಿತಾ' ಎಂದು ಭಾವಿಸಿಕೊಂಡು, ಪಾಠ ಆಧಾರಿತ ಮೌಲ್ಯಾಂಕನದಲ್ಲಿ ನೀವು ಸಾಧಿಸಿದ ಪ್ರಗತಿಯನ್ನು ವಿವರಿಸಿ, ಧಾರವಾಡದಲ್ಲಿ ವಾಸವಾಗಿರುವ 'ಸೌಮ್ಯ' ಎಂಬ ಹೆಸರಿನ ತಾಯಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 X 5 = 5**

45. ಗ್ರಂಥಾಲಯಗಳ ಮಹತ್ತ್ವ.

**ಅಥವಾ**

ಭಾವೈಕ್ಯತೆಯನ್ನು ಬೆಳೆಸುವಲ್ಲಿ ಕ್ರೀಡೆಗಳ ಪಾತ್ರ.